# ಹೊಸತು

## ಕೇಶ ಕಿಂಗ್ ತೈಲ

ಆಯುರ್ವೇದ ತೈಲ ಬ್ರಾಂಡ್ ಕೇಶ ಕಿಂಗ್ ಹೊಸ ತೈಲವೊಂದನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. 21 ಆಯುರ್ವೇದ ಗಿಡಮೂಲಿಕೆಗಳಿಂದ ಸಮೃದ್ಧವಾಗಿದೆ. 'ಕೂದಲು ಉದುರುವಿಕೆ ಮತ್ತು ಇತರ ಕೇಶ ಸಂಬಂಧಿತ ಸಮಸ್ಯೆಗಳಾಗಿರುವ ತಲೆಹೊಟ್ಟು, ಒಣಗಿದ ಮತ್ತು ಶಕ್ತಿಹೀನ ಕೂದಲು ರೀತಿಯ ತೊಂದರೆಗಳಿಂದ ಮುಕ್ತಿ ನೀಡುವಲ್ಲಿ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುತ್ತದೆ. ಈ ತೈಲವನ್ನು ಬಳಸಿ ಮಸಾಜ್ ಮಾಡಿಕೊಳ್ಳುವುದರಿಂದ ಆಯಾಸ, ನಿದ್ರಾಹೀನತೆ ಮತ್ತು ತಲೆ ನೋವು ಕೂಡ ಕಡಿಮೆಯಾಗುತ್ತದೆ' ಎಂಬುದು ಕಂಪೆನಿ ವಿವರಣೆ.

ಬೆಲೆ 60 ಎಂಎಲ್‌ಗೆ 70 ರೂಪಾಯಿ.
ಮಾಹಿತಿಗೆ: 72595 79122 /77952 13926







## ಯುರೇಕ ಫೋರ್ಬ್ಸ್ ಅಕ್ವಾಗಾರ್ಡ್

ಶುದ್ಧ ಆರೋಗ್ಯಕರ ಕುಡಿಯುವ ನೀರಿಗಾಗಿ ಯುರೇಕ ಫೋರ್ಬ್ಸ್ ಹೊಸ ಅಕ್ವಾ ಗಾರ್ಡ್ ಅನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ವಾಟರ್ ಪ್ಯೂರಿಫಿಕೇಶನ್‌ಗಾಗಿ 17 ಬಗೆಯ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಲಾಗಿದ್ದು, ಸದ್ಯ ಮಾರುಕಟ್ಟೆಯಲ್ಲಿರುವ ಅಕ್ವಾಗಾರ್ಡ್‌ಗಿಂತ ಹೆಚ್ಚು ಸೌಲಭ್ಯ ಹೊಂದಿದೆ ಎನ್ನುವುದು ಕಂಪೆನಿ ಮಾತು.

ಬೆಲೆ 16,490 ರೂಪಾಯಿ.

## ಸ್ಯಾಮ್‌ಸಂಗ್ ಗೇಮಿಂಗ್ ಮಾನಿಟರ್

ಸ್ಯಾಮ್‌ಸಂಗ್ ಎಲೆಕ್ಟ್ರಾನಿಕ್ಸ್ ಹೊಸ ಕರ್ವ್ಡ್ ಗೇಮಿಂಗ್ ಮಾನಿಟರ್ ಅನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಇದು 1800 ಎಂಎಂ ರೇಡಿಯಸ್ ಹೊಂದಿದೆ. ವಿಡಿಯೊ ಗೇಮಿಂಗ್ ಬಳಕೆದಾರರಿಗೆ ಹೊಸ ಅನುಭವ ನೀಡಲಿದೆ ಎಂಬುದು ಕಂಪೆನಿ ವಿವರಣೆ. ಬೆಲೆ 35 ಸಾವಿರ ರೂಪಾಯಿ.
ಮಾಹಿತಿಗೆ: innews.samsung.com



## ಲಾವ ಸ್ಮಾರ್ಟ್‌ಫೋನ್

ಲಾವ ಇಂಟರ್‌ನ್ಯಾಷನಲ್ ಲಿಮಿಟೆಡ್ ಕಂಪೆನಿ ಲಾವ 4ಜಿ ಕನೆಕ್ಟ್ ಎಂ1 ಎಂಬ 4ಜಿ ಆಧಾರಿತ ಸ್ಮಾರ್ಟ್ ಫೋನ್ ಅನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಈ ಪಾಕೆಟ್ ಸ್ನೇಹಿ 4 ಜಿ ಸ್ಮಾರ್ಟ್ ಫೋನ್ 3,333 ರೂಪಾಯಿಗೆ ಲಭ್ಯ. ಬ್ಯಾಟರಿ ಬ್ಯಾಕ್ ಅಪ್ ಉತ್ತಮವಾಗಿದ್ದು, 4ಜಿ ಸಂಪರ್ಕವನ್ನು ಅತ್ಯಂತ ವೇಗವಾಗಿ ಪಡೆಯಲು ಸಾಧ್ಯವಾಗುವಂತಿದೆ.

ವೈರ್‌ಲೆಸ್ ಎಫ್‌ಎಂ, ಸ್ಪಷ್ಟ ಧ್ವನಿಗಾಗಿ ಬಾಕ್ಸ್ ಸ್ಪೀಕರ್ ಮತ್ತು ಕೆ ಕ್ಲಾಸ್ ಆಂಪ್ಲಿಫೈಯರ್ ಮತ್ತು ವಿಜಿಎ ಕ್ಯಾಮೆರಾವನ್ನು ಒಳಗೊಂಡಿದೆ. ಈ ಮೂಲಕ ಲಾವ 4ಜಿ ಕನೆಕ್ಟ್ ಎಂ1 ಸಂಪೂರ್ಣ ಮನೋರಂಜನೆಯ ಸಾಧನವೂ ಆಗಲಿದೆ ಎನ್ನುತ್ತದೆ ಕಂಪೆನಿ.

ವಿವರಕ್ಕೆ: 99720 66555







## ಗ್ರೊಹೆಯಿಂದ ಸ್ನಾನದ ಮನೆ ಉತ್ಪನ್ನ

ಗೃಹೋಪಯೋಗಿ ಉತ್ಪನ್ನಗಳಿಗೆ ಹೆಸರಾದ ಗ್ರೊಹೆ ಇದೀಗ ಬಾತ್‌ರೂಮ್ ಮತ್ತು ಅಡುಗೆ ಮನೆಯಲ್ಲಿ ಅಂದವಾಗಿ ಕಾಣಲು ವಿವಿಧ ಬಗೆಯ ನವನವೀನ ಮಾದರಿಯ ವಾಷ್ ಬೇಸಿನ್, ಟಬ್ ಮತ್ತಿತರ ಉತ್ಪನ್ನಗಳನ್ನು ಮಾರುಕಟ್ಟೆಗೆ ಪರಿಚಯಿಸಿದೆ. ಬದಲಾದ ಜಾಗತಿಕ ಜೀವನಶೈಲಿಗೆ ಅನುಗುಣವಾಗಿ ಈ ಉತ್ಪನ್ನಗಳನ್ನು ಗ್ರಾಹಕರಿಗೆ ನೀಡಲಾಗುತ್ತಿದೆ ಎನ್ನುತ್ತದೆ ಕಂಪೆನಿ.

ವಿವರಕ್ಕೆ: 740611737